


**ಲೈಂಗಿಕ ಅಲ್ಪಸಂಖ್ಯಾತರಲ್ಲಿ ಕೆಳಜಾತಿ, ಆದಿವಾಸಿ, ಬಡವರೂ ಇದ್ದಾರೆ. ಅವರು ಅಲ್ಪಸಂಖ್ಯಾತರಲ್ಲೇ ಅಲ್ಪಸಂಖ್ಯಾತರು.**

ಪಡೆಯಬೇಕು. ಆ ನಿಟ್ಟಿನಲ್ಲಿ ನೋಡಿದರೆ ಮೀಸಲಾತಿ ಎನ್ನುವುದು ಭರವಸೆ ನೀಡಬಹುದು. ಆದರೆ, ಮೀಸಲಾತಿಯೇ ಪರಿಹಾರವಂತೂ ಖಂಡಿತ ಅಲ್ಲ' ಎಂದು ಅವರಿಗೆ ಅನಿಸಿದೆ.

'ಟ್ರಾನ್ಸ್‌ಮೆನ್ಸ್' ಸಮಸ್ಯೆಯ ಅನುಭವವನ್ನು ಬಿಚ್ಚಿಡುವ ಶಿಲೋಕ್, ಸಾಮಾಜಿಕ ಕಾರ್ಯಕರ್ತ, ಪತ್ರಕರ್ತ ಆಗಿ ಸಮುದಾಯದಲ್ಲಿ ಅನೇಕರನ್ನು ನೋಡಿದ್ದಾರೆ. ಪ್ರತಿಯೊಬ್ಬರ ಜೀವನವೂ ತುಂಬ ವಿಭಿನ್ನ ಎನ್ನುವುದು ಅವರ ಗ್ರಹಿಕೆ. ಬೇರೆ ಜನಸಮುದಾಯದ ರೀತಿ ಲೈಂಗಿಕ ಅಲ್ಪಸಂಖ್ಯಾತರಲ್ಲ. ಮತೀಯ ಅಲ್ಪಸಂಖ್ಯಾತರು ಅಂದರೆ ನಿರ್ದಿಷ್ಟವಾಗಿ ಗುರುತು ಮಾಡಬಹುದು. ಅಂತೆಯೇ ಜಾತಿ ಸಮುದಾಯವನ್ನೂ ಗುರ್ತಿಸಬಹುದು. ಟ್ರಾನ್ಸ್‌ಜೆಂಡರ್ ಸಂಕೀರ್ಣ ಸಮುದಾಯ. ಇವರಲ್ಲಿ ವಿಭಿನ್ನತೆ ಸಿಕ್ಕಾಪಟ್ಟೆ ಹೆಚ್ಚಿದೆ. ಯೋಚನೆಗೂ ನಿಲುಕುವುದಿಲ್ಲ. ಹಿಜ್ರಾ ಸಮುದಾಯ ಭೌಗೋಳಿಕ ಮತ್ತು ಧಾರ್ಮಿಕ ಐಡೆಂಟಿಟಿ. ಅದೇ ರೀತಿ ಜೋಗಪ್ಪ, ಶಿವಶಕ್ತಿ, ಕಿನ್ನರರು ಪ್ರತ್ಯೇಕ ಐಡೆಂಟಿಟಿ ಹೊಂದಿರುತ್ತಾರೆ. ಇವರಲ್ಲಿ ಅಂತರ್ ಲೈಂಗಿಕ ಸಂಪರ್ಕ ಇರುವವರೂ ಇದ್ದಾರೆ ಎನ್ನುವ ಸಾಂಸ್ಕೃತಿಕ ವಿವರಗಳನ್ನು ಅವರು ನೀಡುತ್ತಾರೆ.

''ಜೈವಿಕವಾಗಿ ಪ್ರತಿಯೊಬ್ಬರಿಗೂ ಒಂದು ಹಂತದಲ್ಲಿ ಹೆಣ್ಣಿಗೆ ಗಂಡಾಗುವ, ಗಂಡಿಗೆ ಹೆಣ್ಣಾಗುವ ಬಯಕೆ ಹುಟ್ಟಬಹುದು. ಟ್ರಾನ್ಸ್‌ಮೆನ್‌ಗಳಲ್ಲಿ ಗಂಡು ದೇಹದ ಶ್ರೀಮಂತಿಕೆ ಇರುವುದಿಲ್ಲ. ಆಕೆ ಅವನಾಗಲು ಸಾಕಷ್ಟು ಅಡ್ಡಿಗಳನ್ನು ಎದುರಿಸಬೇಕಾಗುತ್ತದೆ. ಮೊದಲ ದೊಡ್ಡ ಸಮಸ್ಯೆ, ತಾವು ಹೀಗೆ ಎಂದು ಹೇಳಲು ಆಗದೇ ಇರುವುದು. ಹೆಣ್ಣಾಗಿ ಹುಟ್ಟಿ ಗಂಡಾಗುವ ಪ್ರಕ್ರಿಯೆಯನ್ನು ಚಿಕ್ಕವಯಸ್ಸಿನಲ್ಲಿ ಪೋಷಕರು ಬೆಂಬಲಿಸುತ್ತಾರೆ. ಏಕೆಂದರೆ, 'ಗಂಡು' ಬಲಶಾಲಿ ಎನ್ನುವ ನಂಬಿಕೆಯಿದೆ. ಅದೇ ಹೆಣ್ಣು ಪ್ರಾಯದಲ್ಲಿ ಗಂಡಿನಂತಾಗಬೇಕು ಅಂದರೆ ಒಪ್ಪುವುದಿಲ್ಲ. ಆಗ ಮನೆ ಬಿಡುವ, ತಮ್ಮ ಐಡೆಂಟಿಟಿ ಬದಲಿಸಬೇಕಾದ ಅನಿವಾರ್ಯತೆ ಬರುತ್ತದೆ. ಸರ್ಜರಿ ಕೂಡ ಅತ್ಯಂತ ಕಷ್ಟಕರ. ಲಿಂಗ ಬದಲಾವಣೆ ಪುರುಷನಷ್ಟು ಹೆಣ್ಣಿಗೆ ಸುಲಭ ಅಲ್ಲ. ಹಾಗಾಗಿ, ಮುಕ್ತವಾಗಿ ಹೇಳಿಕೊಳ್ಳದೆ ಗೌಪ್ಯವಾಗಿಯೇ ಇರಲು ಅನೇಕ ಟ್ರಾನ್ಸ್‌ಮೆನ್ ಬಯಸುತ್ತಾರೆ. ಅದೇನಾದರೂ, ಪುಂಡಾಟಿಕೆಯ ಹುಡುಗರಿಗೆ ಗೊತ್ತಾದರೆ ಅವರ ನಡವಳಿಕೆ ವಿಕೋಪಕ್ಕೆ ಹೋಗುತ್ತದೆ. 'ನಿನಗೇನಿದೆ ತೋರಿಸು' ಎಂದು ಪೀಡಿಸುತ್ತಾರೆ. ಸುರಕ್ಷತೆ ಎನ್ನುವುದು ಇನ್ನೂ ಸಮಸ್ಯೆ ಆಗುತ್ತದೆ. ಮೀಸಲಾತಿಯ ಸೌಲಭ್ಯ ಅದನ್ನು ಬ್ರೇಕ್ ಮಾಡಬಹುದು. ಅವರಿಗೂ ಆರ್ಥಿಕ–ಸಾಮಾಜಿಕ ಬಲ ಬೇಕು.

ಒಂದು ಕಾಲದಲ್ಲಿ ಟ್ರಾನ್ಸ್‌ವುಮನ್‌ಗಳೇ ಟ್ರಾನ್ಸ್‌ಮೆನ್‌ಗಳನ್ನು ಒಪ್ಪುತ್ತಿರಲಿಲ್ಲ. ಹಿಜ್ರಾ ಸಮುದಾಯದಲ್ಲಿ ಗಂಡು ಹೆಣ್ಣಾಗುವುದು ಸಹಜ, ಹೆಣ್ಣು ಗಂಡಾಗುವುದು ಒಪ್ಪಿತ ಆಗಿರಲಿಲ್ಲ. ಇವರಿಬ್ಬರ ಸಮಸ್ಯೆ ಭಿನ್ನ ಅಲ್ಲ. ಅದನ್ನು ನೋಡುವ ದೃಷ್ಟಿಯಲ್ಲಿ ಭಿನ್ನತೆ ಇದೆ. ಈ ಕಾರಣಕ್ಕೆ ಸಮರ್ಪಕ ಶಿಕ್ಷಣ ಬೇಕು. ಸಮಾಜಕ್ಕೆ ಈ ಬಗ್ಗೆ ಅರಿವೇ ಇರುವುದಿಲ್ಲ. ಅನೇಕರು ಇದು ಸಮಸ್ಯೆ ಎಂದು ನೋಡುತ್ತಾರೆ. ಆದರಿದು ಸ್ವಾಭಾವಿಕ, ಅದರಲ್ಲಿ ವಿಶೇಷ ಏನೂ ಇಲ್ಲ. ವ್ಯಕ್ತಿಯ ಭಿನ್ನ ಗುಣಧರ್ಮದಲ್ಲಿ ಇದೂ ಒಂದು. ಈ ಅರಿವನ್ನು ಮೂಲದಿಂದಲೇ ಮೂಡಿಸಬೇಕು. ತಂದೆ–ತಾಯಿಗೂ ಇಂತಹ ಮಕ್ಕಳು ಹುಟ್ಟಿದರೆ ಹೇಗೆ ಪೋಷಣೆ ಮಾಡಬೇಕು ಎನ್ನುವುದನ್ನು ಕಲಿಸಬೇಕು.

ಪರಿಸರವನ್ನು ಹೇಗೆ ಸೃಷ್ಟಿಸುತ್ತೇವೆ ಎನ್ನುವುದು ಮುಖ್ಯ. ಅದು ಪಾಪ ಪುಣ್ಯದ ಪ್ರತಿಫಲವಲ್ಲ. ಸಮಾಜದ ದೃಷ್ಟಿಯಲ್ಲಿ ಒಂದು ಮಗು ಹುಟ್ಟಿದರೆ ಅದನ್ನು ಓದಿಸಿ ಬೆಳೆಸಬೇಕು. ಉದ್ಯೋಗಕ್ಕೆ ಸೇರಿದ ಮೇಲೆ ಮದುವೆ ಮಾಡಬೇಕು. ವಂಶೋದ್ಧಾರಕ್ಕೆ ಒಂದು ಮಗು ಪಡೆಯಬೇಕು. ಜೀವನಚಕ್ರ ಹಾಗೆಯೇ ಸಾಗುತ್ತದೆ. ಇದನ್ನು ಎಲ್ಲರ ಮೇಲೂ ಪ್ರಯೋಗ ಮಾಡುತ್ತಾರೆ. ವಾಸ್ತವದಲ್ಲಿ ಕೆಲವರಿಗೆ ಮಕ್ಕಳನ್ನು ಮಾಡಿಕೊಳ್ಳಲು ಇಷ್ಟ ಇರಲ್ಲ. ಅವರ ಪ್ರಕಾರ, ಈ ಜಗತ್ತಿನ ಕೆಟ್ಟ ಪರಿಸರಕ್ಕೆ ಇನ್ನೊಂದು ಜೀವ ತರಬಾರದು ಎನ್ನುವ ಚಿಂತನೆ ಇರುತ್ತದೆ. ಅಂತಹ ದಂಪತಿ ಯೋಚಿಸಿ ದತ್ತು ತೆಗೆದುಕೊಳ್ಳುತ್ತಾರೆ. ಇಲ್ಲದಿದ್ದರೆ ಬೆಕ್ಕು–ನಾಯಿ ಸಾಕುತ್ತಾರೆ. ಇನ್ನೂ ಕೆಲವರು ಮದುವೆಯನ್ನೇ ಆಗುವುದಿಲ್ಲ. ಅಂದರೆ ಸಂತಾನೋತ್ಪತ್ತಿ ಉದ್ದೇಶದ ಆಚೆ ಜೀವನ ಇದೆ ಎನ್ನುವುದು ಅರ್ಥ ಆಗಬೇಕು''.

ಶಿಲೋಕ್ ಅವರು ಕನಸು ಕಾಣುವುದು ಜೀವಪರ ಸಮಾಜವನ್ನು. ಅಂಥ ಪರಿಸರವನ್ನು ಅವರು ಕನಸಿನಲ್ಲಷ್ಟೇ ಬಯಸುತ್ತಿಲ್ಲ; ಸಾಕಾರಗೊಳಿಸುವ ನಿಟ್ಟಿನಲ್ಲಿ ಕ್ರಿಯಾಶೀಲರೂ ಆಗಿದ್ದಾರೆ. ■